**ಸಾಕ್ಷಿಯನ್ನು ದಿಃ 15.07.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ-**

ನಾನು 22 ವರ್ಷದಿಂದ ವಕೀಲರ ವೃತ್ತಿಯನ್ನು ಮಾಡುತ್ತಿದ್ದೇನೆ . ಈ ಕೇಸನ್ನು ರಿಜಿಸ್ಟರ್ ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ . ಅದರಲ್ಲಿ ಇರುವ ವಿದ್ಯಾಮಾನವನ್ನು ನಾನೇ ಓದಿ ತಿಳಿದುಕೊಂಡಿರುತ್ತೇನೆ . ಪ್ರಕರಣ ದಾಖಲಿಸುವ ಸಮಯದಲ್ಲಿ 1 ನೇ ಆರೋಪಿ ಮೃತ ಪಟ್ಟಿದ್ದರು ಎಂದರೆ ಸರಿ. 1 ನೇ ಆರೋಪಿಯು ಆತನ ತಪ್ಪಿನಿಂದ ಅಪಘಾತ ಪಡಿಸಿಕೊಂಡು ಮೃತಪಟ್ಟಿದ್ದರು , ಚಾರ್ಜ್ ಶೀಟನ್ನು ನನ್ನ ಮೇಲೆ ಹಾಕಿದ ಕಾರಣ ಅವರನ್ನು ಈ ಕೇಸಿನಲ್ಲಿ ಸೇರಿಸಲಾಗಿದೆ . ರಾಜೇಶ್ ರವರು ಬದುಕಿದ್ದಾಗ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದು ದೂರು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪಿರ್ಯಾದಿನಲ್ಲಿ ಸಂಪೂರ್ಣ ಆರೋಪಿ 1 ನೇ ಆರೋಪಿ ರಾಜೇಶ್ ಹಾಗೂ ತನಿಖಾಧಿಕಾರಿ ಮೇಲೆ ಮಾತ್ರ ಇರುವುದು ಎಂದರೆ ಸರಿ . ಮುಂದುವರೆದು 2 ನೇ ಆರೋಪಿಯ ಮೇಲು ಸಹ ಹೇಳಿರುತ್ತೇನೆ ಎಂದು ನುಡಿಯುತ್ತಾರೆ . 2 ನೇ ಆರೋಪಿ ನನ್ನ ಮೇಲೆ ಸುಳ್ಳು ದೂರು ಕೊಟ್ಟಿದ್ದರು ಎಂದು ಆರೋಪಿಸಿರುತ್ತೇನೆ . ಅಂತಹ ಸುಳು ದೂರಿನ ದಾಖಲೆಯನ್ನು ನಾಯಾಲಯಕ್ಕೆ ಹಾಜರು ಪಡಿಸಿಲ್ಲ .

ನನ್ನ ವಿರುದ್ಧ 2 ನೇ ಆರೋಪಿ ದೂರು ಕೊಟ್ಟ ಮೇರೆಗೆ ನನ್ನ ಮೇಲೆ ಚಾರ್ಜ್ ಶೀಟ್ ಆಗಿ ಇದೇ ನ್ಯಾಯಾಲಯದಲ್ಲಿ ಕೇಸು ಬಾಕಿ ಇರುತ್ತದೆ ಎಂದರೆ ಸರಿ . ಸದರಿ ಕೇಸಿನಲ್ಲಿ ಇನ್ನೂ ಸಾಕ್ಷಿ ವಿಚಾರಣೆ ಆಗಿರುವುದಿಲ್ಲ . ಸಾಕ್ಷಿ ವಿಚಾರಣೆಯಾಗಿ ತೀರ್ಪು ಹೊರಬರದೇ ಇರುವುದರಿಂದ ಅವರು ಕೊಟ್ಟಿರುವ ದೂರು ಸುಳ್ಳು ಎಂದು ಹೇಳುತ್ತಿರುವುದು ಸರಿಯಲ್ಲ ಎಂದರೆ ಸರಿಯಲ್ಲ . ಎರಡನೇ ಆರೋಪಿತನ ಮೇಲೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಐಪಿಸಿ 209 ರಡಿ ಯಾವುದೇ ಆರೋಪ ಇಲ್ಲ ಎಂದರೆ ಸರಿಯಲ್ಲ . ನನ್ನ ಪ್ರಾಕ್ಟೀಸ್ ಅವಧಿಯಲ್ಲಿ ಐ ಪಿ ಸಿ 209 ರಡಿ ಬರುವಂತಹ ಕೇಸುಗಳನ್ನು ನಿರ್ವಹಿಸಿರುತ್ತೇನೆ. ನನ್ನಿಂದ ಲಾಭ ಪಡೆಯಲು ಸದರಿ ದೂರಿನಲ್ಲಿ ಅಂಶಗಳು ಇದೆಯೇ ಎಂದರೆ ಇದೆ ಎನ್ನುತ್ತಾರೆ . ಸದರಿ ದೂರಿನಲ್ಲಿ ಸಂಪೂರ್ಣವಾಗಿ ನನ್ನ ಮೇಲೆ ಆರೋಪ ಮಾಡಿರುತ್ತಾರೆ . ನನ್ನ ವಿರುದ್ಧ ಸತ್ಯಾಂಶಗಳನ್ನು ಹೇಳಿ ದೂರು ನೀಡಿದರೆ ಅದು ಸರಿ ಇರುತ್ತದೆ ಎಂದರೆ ಸಾಕ್ಷಿ ಅವರು ಕೊಟ್ಟಿರುವುದೆಲ್ಲ ಸುಳ್ಳು ಎನ್ನುತ್ತಾರೆ . ನನ್ನನ್ನು ಎದುರಿಸಿ ಲಾಭ ಹೊಂದುವ

ಉದ್ದೇಶದಿಂದ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ . ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಪರಿಹಾರ ಕೋರಿ ಚಾರ್ಜ್ ಶೀಟ್ ವಿರುದ್ಧ ಅಪೀಲು ಹೋಗಿರುತ್ತೇನೆ ಎಂದರೆ ಸರಿ .

2 ನೇ ಆರೋಪಿ ನನ್ನ ಮೇಲೆ ಕೊಟ್ಟಿರುವ ದೂರಿನ ಬಗ್ಗೆ ತಿಳಿದುಕೊಂಡಿರುತ್ತೇನೆ .ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯೇ ಎಂದರೆ ಈಗಾಗಲೆ ಹಾಜರು ಪಡಿಸಿದ್ದೇನೆ . ಸದರಿ ದೂರಿನಲ್ಲಿ ಎರಡನೇ ಆರೋಪಿ ಪ್ರತ್ಯಕ್ಷ ದರ್ಶಿ ಅಲ್ಲ ಎಂದರೆ ಸರಿ . ನಿಪಿ.29 ರಂತೆ 2 ನೇ ಆರೋಪಿ ದೂರು ನೀಡಿರುತ್ತಾರೆ. ಅದರ ಪ್ರಕಾರ 2 ನೇ ಆರೋಪಿ ಸಾಂಧರ್ಭಿಕ ಸಾಕ್ಷಿ ಎಂದರೆ ಸರಿ . 2 ನೇ ಆರೋಪಿಗೆ ಅಪಘಾತದ ವಿವರವನ್ನು ನೀಡಿದವರು ಎಗ್ಗಂದೂರು ಅಣ್ಣೆಗೌಡರು , ಕಾಮಗೋಡನ ಹಳ್ಳಿಯ ಗ್ರಾಮಸ್ಥರು ಎಂದರೆ ಇರಬಹುದು . ಸದರಿ ದೂರಿನಲ್ಲಿ ನನ್ನ ಮೇಲೆ ನೇರವಾದ ಆರೋಪ ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಅತೀವೇಗ ಮತ್ತು ಅಜಾಗರುಕತೆಯಿಂದ ವಾಹನವನ್ನು ಓಡಿಸಿ ಬಲಕ್ಕೆ ತಿರುಗಿಸಿದ ಪರಿಣಾಮ ಅವರು ದೂರು ಕೊಟ್ಟಿದ್ದರು . ಅವರ ಸಾವಿಗೆ ನಾನೇ ಕಾರಣ ಎಂದು ದೂರು ಕೊಟ್ಟಿರುತ್ತಾರೆ . ದೂರಿನ ಆದಾರದ ಮೇಲೆ ಪೊಲೀಸರು ಸ್ಥಳಕ್ಕೆ ಹೋಗಿ ಮಹಜರ್ ಮತ್ತು ಸ್ಕೆಚನ್ನು ಮಾಡಿರುತ್ತಾರೆ . ಸದರಿ ಸ್ಚೆಚಿನಲ್ಲಿ ನಾನು ವಾಹವನ್ನು ಬಲಕ್ಕೆ ತಿರುಗಿಸಿ ಅಪಘಾತವಾದ ಬಗ್ಗೆ ತೋರಿಸಿರುತಾರೆ ಎಂದರೆ ಸರಿಯಲ್ಲ ಸಾಕ್ಷಿ ಪುನಃ ತನಿಖಾಧಿಕಾರಿಯೇ ತಮಗೆ ಬೇಕಾದ ಹಾಗೆ ಸ್ಕೆಚನ್ನು ತಯಾರು ಮಾಡಿರುತ್ತಾರೆ . ಸದರಿ ಸ್ಕೆಚಿನ ಆಧಾರದ ಮೇಲೆ ಮಹಜರನ್ನು ನನ್ನ ವಿರುದದ. ಮಾಡಿರುತ್ತಾರೆ ಎಂದರೆ ಸರಿ .

ಆ ನಂತರ ಪ್ರತ್ಯಕ್ಷ ಸಾಕ್ಷಿದಾರರನ್ನು ಸಾಕ್ಷಿ ಪಟ್ಟಿಯಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ . ಸಂಪೂರ್ಣ ತನಿಖೆ ನಡೆಸಿ ದೂರು ಮಹಜರ್ , ಸ್ಕೆಚ್ , ಪಿ ಎಂ ವರದಿ , ಐಎಂವಿ ವರದಿ ಆಧಾರದ ಮೇಲೆ ನನ್ನ ವಿರುದ್ಧ ದೋಷಾರೋಪಣ ಪಟ್ಟಿಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎನ್ನುತ್ತಾರೆ. ಸದರಿ ಸಾಕ್ಷಿ ಪಟ್ಟಿಯಲ್ಲಿ ಹೆಗ್ಗಂದೂರಿನ ಅಣ್ಣೆಗೌಡರು ಹನಗೂಡು ಗ್ರಾಮದ ಗೋವಿಂದ ರಾಜು , ಕಂಪಲಾಪುರದ ರಘು , ಹೆಗ್ಗಂದೂರು ಗ್ರಾಮದ ಸೂರೇ ಗೌಡ ಎನ್ನುವವರು ಪ್ರತ್ಯಕ್ಷ ಸಾಕ್ಷಿ ದಾರರನ್ನಾಗಿ ತೊರಿಸಿರುತ್ತಾರೆ ಎಂದರೆ ಸಾಕ್ಷಿ ಸೂರೇ ಗೌಡ ಎನ್ನುವವರು ಮಾತ್ರ ಇದ್ದರು ಎನ್ನುತ್ತಾರೆ . ಅಪಘಾತ ಹಿನ್ನಲೆಯಲ್ಲಿ ನಾನು ಚಾಲನೆ ಮಾಡುತ್ತಿದದ ಬೈಕನ್ನು ಪೊಲೀಸರು ವಶಕ್ಕೆಪಡೆದಿದ್ದರು ಎಂದರೆ ಸರಿ .

2 ನೇ ಆರೋಪಿ Hear say ಸಾಕ್ಷಿದಾರ ಮಾತ್ರ ಎಂದರೆ ಸಾಕ್ಷಿ ಅವರು ಅಪಘಾತವನ್ನು ನೋಡಿದ್ದೇನೆ ಎಂದೇ ದೂರು ಕೊಟ್ಟಿದ್ದಾರೆ ಎನ್ನುತ್ತಾರೆ . ಅವರು ಕೊಟ್ಟಿರುವ ದೂರಿನಲ್ಲಿ ಐಪಿಸಿ ಕಲಂ 209 ರಲ್ಲಿ ಯಾವುದೇ ಆರೋಪ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ . ಅವರು ಹಾಕಿರುವಂತಹ ಕೇಸಿಗೆ ಕುಂಟಿತಗೊಳಿಸಬೇಕೆಂದು ಈ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾನು ಸಲ್ಲಿಸಿರುವ ಖಸಗಿ ದೂರಿನಲ್ಲಿ 2 ನೇ ಆರೋಪಿಯ ಮೇಲೆ ನೇರವಾದ ಆರೋಪ ಇಲ್ಲ ಎಂದರೆ ಸರಿಯಲ್ಲ . ಶಶಾಂಕ್ ಅಭಿಶೇಕ್, ಸೂರೇ ಗೌಡ , ಬೈರೆ ಗೌಡ ಮತ್ತು ರವಿಗೌಡರವರು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಸಂಬಂಧ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ . 1,2,4 ಮತ್ತು 5 ಸಾಕ್ಷಿದಾರರು ನಮ್ಮ ಕಛೇರಿಗೆ ಬರುವಂತಹ ಕ್ಲೈಂಟ್ ಗಳು ಎಂದರೆ ಸರಿಯಲ್ಲ . ಸದರಿ ಸಾಕ್ಷಿದಾರರನ್ನು ಹೊರತು ಪಡಿಸಿ ಬೇರೆ ತನಿಖಾಧಿಕಾರಿಯನ್ನಾಗಲಿ ವೈದ್ಯರನ್ನಾಗಲಿ ಸಾಕ್ಷಿ ಪಟ್ಟಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ನಾನು ಕೊಟ್ಟಂತಹ ದೂರನ್ನು ಸ್ವೀಕರಿಸಿದ ಎಸ್ ಹೆಚ್ ಒ ಮತ್ತು ವೈದ್ಯಾಧಿಕಾರಿಗಳನ್ನು ಸೇರಿಸಿದರೆ ಸತ್ಯಾಂಶ ಹೊರ ಬರುತ್ತದೆ ಎಂದು ಸೇರಿಸಿಲ್ಲ ಎಂದರೆ ಸರಿಯಲ್ಲ . ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.